ಇಟ್ಟಿದ್ದೇವೆ, ಮತ್ತು ಎಲ್ಲಿ ಸರ್ಕಾರದ ಜಮೀನು ಇಲ್ಲ ಅಂಥಾ ಕಡೆಗಳಲ್ಲಿ ಖಾಸಗಿ ಜಮೀನುಗಳನ್ನು ಖರೀದಿ ಮಾಡುವ ಮುಖಾಂತರವಾಗಲಿ, ಅಥವಾ ಭೂ ಸ್ವಾಧೀನದ ಮುಖಾಂತರ ಜಮೀನನ್ನು ಖರೀದಿ ಮಾಡಿ, ಆ ಗ್ರಾಮಕ್ಕೆ ಸ್ಮಶಾನದ ಸೌಲಭ್ಯವನ್ನು ಒದಗಿಸುವುದಕ್ಕೆ ನಾವು ನಿರ್ಣಯವನು ಕೈಗೊಂಡಿದ್ದೇವೆ

ಶ್ರೀ ಎಸ್ ರಾಜೇಂದ್ರನ್ ಮಾನ್ಯ ಉಪಾಧ್ಯಕ್ಷರೆ, ಈ ಸ್ಮಶಾನದ ವಿಚಾರವಾಗಿ ತಾವು ಪತ್ರಿಕೆಗಳಲ್ಲಿ ಓದಿರಬಹುದು ನಮ್ಮ ಕ್ಷೇತ್ರದಲ್ಲಿ ಸ್ಮಶಾನವನ್ನು D C Office ನವರೆ ಕೊಟ್ಟಿದ್ದಾರೆ freedom fighter ಗೆ ಸ್ಮಶಾನ ಜಾಗವನ್ನು ಕೊಟ್ಟಿದ್ದಾರೆ ಇಲ್ಲಿ ಮುಸ್ಲಿಮರು ಏನು ಮಾಡಿದ್ದಾರೆಂದರೆ, ಇದು ನಮಗೆ ಸೇರಿದ್ದು, ಅವರಿಗೆ ಹೇಗೆ ಕೊಟ್ಟಿದ್ದೀರೆಂದು ದೊಡ್ಡ ಗಲಾಟೆಯಾಗಿ, ಕೇಸ್ ಆಗಿ, law and order problem ಬರುವ ಸ್ಥಿತಿಗೆ ಹೋಗಿ, ತಹಶೀಲ್ದಾರರೆಲ್ಲಾ ಹೋಗಿ, ಅದನ್ನು ಸರ್ಕಾರಕ್ಕೆ ತಿಳಿಸಿದ್ದಾರೆ ಅದರ ಬಗ್ಗೆ ಸರ್ಕಾರ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಉಪಾಧ್ಯಕ್ಷರೆ, ಇದು ಸ್ಮಶಾನದ ಜಾಗವಿದ್ದರೆ, ಅದನ್ನು ಅದಕ್ಕೆ ಇಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ ಅಲ್ಲಿ ಯಾರಾದರೂ ಅತಿಕ್ರಮಣ ಮಾಡಿದ್ದರೆ, ಅದನ್ನು ತೆರವುಗೊಳಿಸುವಂಥಾ ಕೆಲಸವನ್ನು ಮಾಡುತ್ತೇವೆ ತಾವು ಅದರ ಡಿಟೈಲ್ಸ್ ಕೊಟ್ಟರೆ

ಶ್ರೀ ಜಗದೀಶ್ ಶೆಟ್ಟರ್ · ಸ್ಮಶಾನ ಜಾಗವನ್ನು ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಟ್ಟಿದ್ದಾರೆಂದು ತಾವು ಹೇಳಿದ್ದೀರಿ ನಾನು ಆ ಕಡತವನ್ನು ತರಿಸಿ, ಅದನ್ನು ಯಾವ ರೀತಿಯಲ್ಲಿ ಕೊಟ್ಟಿದ್ದಾರೆ, ಯಾವ ಹಿನ್ನಲೆಯಲ್ಲಿ ಕೊಟ್ಟಿದ್ದಾರೆಂಬುದನ್ನು ಪರಿಶೀಲನೆ ಮಾಡಿಕೊಂಡು, ಅದಕ್ಕೆ ಸರಿಯಾದ ಕ್ರಮವನ್ನು ಕೈಗೊಳ್ಳುತ್ತೇನೆ

ಹೊಸ ಕೆರೆಗಳ ನಿರ್ಮಾಣ

6 (54) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೀದರ ಜಿಲ್ಲೆಯ ವಿವಿಧ ವಿಧಾನ ಸಭಾ ಕ್ಷೇತ್ರಗಳ ಯಾವ ಯಾವ ಗ್ರಾಮಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಹೊಸ ಕೆರೆಗಳನ್ನು ನಿರ್ಮಿಸಲು ಸರ್ವೆ ಮಾಡಲಾಗಿದೆ ಈ ಸರ್ವೆಯನ್ನು ಯಾವಾಗ ಕೈಗೊಳ್ಳಲಾಯಿತು,

ಆ) ಈ ಪೈಕಿ ಇಲ್ಲಿಯವರೆಗೆ ಎಷ್ಟು ಕೆರೆಗಳ ಕಾಮಗಾರಿ ಪ್ರಗತಿಯಲ್ಲಿದೆ, (ಗ್ರಾಮವಾರು ವಿವರಗಳನ್ನು ಒದಗಿಸುವುದು)

ಇ) ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳನ್ನು ನಿರ್ಮಿಸಲಾಗುವುದು, ಇವುಗಳಿಂದ ಎಷ್ಟು ಎಕರೆ ಜಮೀನಿಗೆ ನೀರಾವರಿ ಮತ್ತು ಎಷ್ಟು ಜನ ಸಂಖ್ಯೆಗೆ ಕುಡಿಯುವ ನೀರಿನ ಸೌಲಭ್ಯ ದೊರೆಯುತ್ತದೆ,

ಈ) ಹೊಸ ಕೆರೆಗಳ ನಿರ್ಮಾಣಕ್ಕೆ ಸರ್ಕಾರ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಮತ್ತು ವೆಚ್ಚ ಮಾಡಿರುವ ಹಣವೆಷ್ಟು, ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುತ್ತಿದೆ,

ಉ) ಸದರಿ ಕೆರೆಗಳನ್ನು ನಿರ್ಮಿಸಲು ನಬಾರ್ಡ್‌ನಿಂದ ಅನುದಾನವನ್ನು ಪಡೆದುಕೊಳ್ಳಲಾಗಿದೆಯೇ, ಪಡೆದುಕೊಂಡಿದ್ದಲ್ಲಿ ಎಷ್ಟು ಮೊತ್ತದ ಅನುದಾನವನ್ನು ಪಡೆದುಕೊಳ್ಳಲಾಗಿದೆ ಇದಕ್ಕೆ ರಾಜ್ಯ ಸರ್ಕಾರವು ತನ್ನ ಪಾಲಿನ ಎಷ್ಟು ಮೊತ್ತದ ಮ್ಯಾಚಿಂಗ್ ಗ್ರಾಂಟನ್ನು ಬಿಡುಗಡೆ ಮಾಡಿದೆ? (ಕಳೆದ 3 ವರ್ಷಗಳ ವಿವರಗಳನ್ನು ಒದಗಿಸುವುದು)

ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು)

ಅ) 1985 ರಿಂದ 2006 ರ ಅವಧಿಯಲ್ಲಿ 48 ಕೆರೆ ಕಾಮಗಾರಿಗಳಿಗೆ ಸರ್ವೆ ಕಾರ್ಯ ಮಾಡಲಾಗಿದೆ

ಆ) 1) ಸರ್ವೆ ಮಾಡಿದ ಕಾಮಗಾರಿಗಳು–48

2) ಈ ಪೈಕಿ ಮಂಜೂರಾದ ಕಾಮಗಾರಿಗಳು–41

ಅ) ಪೂರ್ಣಗೊಂಡಿರುವ ಕಾಮಗಾರಿಗಳು–5

ಆ) ಪ್ರಗತಿಯಲ್ಲಿರುವ ಕಾಮಗಾರಿಗಳು–24

ಇ) ಪ್ರಾರಂಭವಾಗಿ ಸಾಕಷ್ಟು ಪ್ರಗತಿಯ ನಂತರ ಅನುದಾನ ಕೊರತೆಯಿಂದ ಸ್ಥಗಿತಗೊಂಡಿರುವ ಕಾಮಗಾರಿ–1

ಈ) ಪ್ರಾರಂಭಿಸಬೇಕಾಗಿರುವ ಕಾಮಗಾರಿ–11

3) ಸರ್ವೆ ಮಾಡಿರುವ ಆದರೆ ಇನ್ನು ಮಂಜೂರಾಗದೆ ಇರುವ ಕಾಮಗಾರಿಗಳು–7

ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಇ) ಮಂಜೂರಾಗದೆ ಇರುವ 775 00 ಲಕ್ಷ ರೂ ಗಳ ಅಂದಾಜು ಮೊತ್ತದ 7 ಹೊಸ ಕೆರೆ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಲಭ್ಯವಾದಲ್ಲಿ ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು ಇವುಗಳಿಂದ 900 ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ
ಕುಡಿಯುವ ನೀರಿನ ಉಪಯೋಗಕ್ಕಾಗಿ ಸಣ್ಣ ನೀರಾವರಿ ಇಲಾಖೆಯಲ್ಲಿ ಯೋಜನೆಗಳನ್ನು ನಿರ್ಮಿಸುವುದಿಲ್ಲ ಆದರೆ ಪರೋಕ್ಷವಾಗಿ ಈ ಉದ್ದೇಶಕ್ಕಾಗಿ ಉಪಯೋಗವಾಗುವುದು

ಈ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಹೊಸಕೆರೆಗಳ ನಿರ್ಮಾಣಕ್ಕೆ ಬಿಡುಗಡೆ ಮಾಡಿರುವ ಮೊತ್ತ/ವೆಚ್ಚ ರೂ. 1091 07 ಲಕ್ಷ, ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನ 1099 50 ಲಕ್ಷ ರೂಗಳು

ಉ) 21 ಕಾಮಗಾರಿಗಳಿಗೆ ನಬಾರ್ಡ್‌ನಿಂದ 1600 10 ಲಕ್ಷ ರೂ ಸಾಲ ಮಂಜೂರಾಗಿರುತ್ತದೆ ಕಳೆದ 3 ವರ್ಷಗಳಿಂದ ನಬಾರ್ಡ್‌ನಿಂದ ಪಡೆಯಲಾಗಿರುವ ಮರುಪಾವತಿ ಮೊತ್ತ ಹಾಗೂ ರಾಜ್ಯದ ಪಾಲು ವಿವರಗಳು ಕೆಳಕಂಡಂತಿದೆ

ಮೊತ್ತ ಲಕ್ಷ ರೂಗಳಲ್ಲಿ

ವರ್ಷ	ನಬಾರ್ಡ್‌ನಿಂದ ಮರುಪಾವತಿಯಾದ ಮೊತ್ತ	ರಾಜ್ಯದ ಪಾಲು
2004–05	3 79	40 08
2005–06	86 64	65 16
2006–07	408 32	352 47
2007–08	16 17	34 00
ಒಟ್ಟು	**514 92**	**491 71**

ವಿಧಾನ ಸಭಾ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಇವರ ಚುಕ್ಕೆ ಗುರುತಿನ ಪ್ರ.ಸಂ 54ಕ್ಕೆ ಅನುಬಂಧ

ಕ್ರ ಸಂ	ವಿಧಾನ ಸಭಾ ಕ್ಷೇತ್ರ	ಕೆರೆ/ಗ್ರಾಮದ ಹೆಸರು	ಸರ್ವೆ ಕಾರ್ಯ ಮಾಡಲಾದ ವರ್ಷ	ಕಾಮಗಾರಿಯ ಪ್ರಗತಿಯ ಹಂತ	ಷರಾ
1	ಔರಾದ	ಮಂಗನಾಳ	1985	ಮಂಜೂರಾಗಿರುವುದಿಲ್ಲ	*
2	–ಸದರ–	ಸೋರಳ್ಳಿ	1997	ಮಂಜೂರಾಗಿರುವುದಿಲ್ಲ	*
3	–ಸದರ–	ನಾಗೂರ ಬಾಬಜಿ	1997	ಮಂಜೂರಾಗಿರುವುದಿಲ್ಲ	*
4	–ಸದರ–	ಕೋಡಗಾಂವ	1997	ಪ್ರಗತಿಯಲ್ಲಿದೆ	
5	–ಸದರ–	ಆಲೂರ ಬೇಲೂರ	1998	ಸ್ಥಗಿತಗೊಂಡಿದೆ	
6	–ಸದರ–	ಬೆಂಬ್ರಾ	1998	ಪ್ರಗತಿಯಲ್ಲಿದೆ	
7	–ಸದರ–	ನಂದಿ ಬಿದರಗಾಂವ	1998	ಮಂಜೂರಾಗಿರುವುದಿಲ್ಲ	*
8	–ಸದರ–	ಅಕನಾಪೂರ	2005	ಪ್ರಗತಿಯಲ್ಲಿದೆ	
9	–ಸದರ–	ನಾಗಮಾರಪಳ್ಳಿ	2005	ಪ್ರಗತಿಯಲ್ಲಿದೆ	
10	–ಸದರ–	ಬೊಂತಿ ತಾಂಡಾ	2006	ಪ್ರಗತಿಯಲ್ಲಿದೆ	
11	–ಸದರ–	ಲಿಂಗಿ ತಾಂಡಾ	2006	ಪ್ರಗತಿಯಲ್ಲವೆ	
12	–ಸದರ–	ಬೇಳಕೂಣಿ(ಸಿ)	2006	ಮಂಜೂರಾಗಿರುವುದಿಲ್ಲ	*
13	ಬೀದರ	ಯಾಕತಾಪೂರ	2000	ಪ್ರಗತಿಯಲ್ಲಿದೆ	
14	–ಸದರ–	ಆಯಾಸಪುರ	2000	ಪ್ರಗತಿಯಲ್ಲಿದೆ	
15	–ಸದರ–	ಮನ್ನಳ್ಳಿ	2000	ಪ್ರಗತಿಯಲ್ಲಿದೆ	
16	–ಸದರ–	ಗಾದಗಿ	2006	ಪ್ರಗತಿಯಲ್ಲಿದೆ	
17	–ಸದರ–	ಗುಮ್ಮಾ	2006	ಪ್ರಗತಿಯಲ್ಲಿದೆ	
18	ಭಾಲ್ಕಿ	ಕಳಸದಾಳ	1986	ಪ್ರಗತಿಯಲ್ಲಿದೆ	
19	–ಸದರ–	ತೆಗಂಪೂರ	2005	ಪ್ರಗತಿಯಲ್ಲಿದೆ	
20	–ಸದರ–	ದೂಣಗಾಪೂರ	2006	ಮಂಜೂರಾಗಿರುವುದಿಲ್ಲ	*
21	ಭಾಲ್ಕಿ	ಭಾಗ್ಯ ನಗರ	2006	ಮಂಜೂರಾಗಿದ್ದು ಪ್ರಾರಂಭಿಸಬೇಕಾಗಿದೆ	
22	–ಸದರ–	ಬಾಜೋಳಗ	2006	ಪ್ರಗತಿಯಲ್ಲಿದೆ	
23	–ಸದರ–	ಮದಕಟ್ಟಿ	2006	ಪ್ರಗತಿಯಲ್ಲಿದೆ	
24	–ಸದರ–	ಕೊನಮೇಲಕುಂದ	2006	ಪ್ರಗತಿಯಲ್ಲಿದೆ	
25	–ಸದರ–	ಕೆರೂರ	2006	ಪ್ರಗತಿಯಲ್ಲಿದೆ	
26	–ಸದರ–	ಸಿದ್ಧಾಪುರವಾಡಿ	2006	ಮಂಜೂರಾಗಿರುವುದಿಲ್ಲ	*
27	ಹುಲಸೂರು	ಅಟ್ಟರಗ	2004	ಮಂಜೂರಾಗಿದ್ದು ಪ್ರಾರಂಭಿಸಬೇಕಾಗಿದೆ	
28	ಬಾಲ್ಕಿ	ಅಂಬೆ ಸಾಂಗವಿ	2006	ಮಂಜೂರಾಗಿದ್ದು, ಪ್ರಾರಂಭಿಸಬೇಕಾಗಿದೆ	
29	ಬಸವ ಕಲ್ಯಾಣ	ಸೈದಾಪೂರ ಕೆರೆ	1998	ಪೂರ್ಣಗೊಂಡಿದೆ	
30	–ಸದರ–	ಹಂದ್ಯಾಳ	2000	ಪ್ರಗತಿಯಲ್ಲಿದೆ	

31	–ಸದರ–	ಹಿರನಾಗಾವ	2000	ಪೂರ್ಣಗೊಂಡಿದೆ	
32	–ಸದರ–	ಕಲಖೋರ ತಾಂಡ	2000	ಪ್ರಗತಿಯಲ್ಲಿದೆ	
33	–ಸದರ–	ಹಾರಾಕೂಡ ತಾಂಡ	2000	ಮಂಜೂರಾಗಿದ್ದು ಪ್ರಾರಂಭಿಸಬೇಕಾಗಿದೆ	
34	–ಸದರ–	ಉಜಳಂಬ	2004	ಪ್ರಗತಿಯಲ್ಲಿದೆ	
35	–ಸದರ–	ಕಾರಿಗೊಂಡ ತಾಂಡ	2004	ಪೂರ್ಣಗೊಂಡಿದೆ	
36	–ಸದರ–	ಹತ್ಯಾಳ	2004	ಪ್ರಗತಿಯಲ್ಲಿದೆ	
37	–ಸದರ–	ಬಟಗೇರವಾಡಿ	2005	ಪ್ರಗತಿಯಲ್ಲಿದೆ	
38	–ಸದರ–	ಮನ್ನಳ್ಳಿ	2005	ಪ್ರಗತಿಯಲ್ಲಿದೆ	
39	–ಸದರ–	ಗುತ್ತಿ	2006	ಮಂಜೂರಾಗಿದ್ದು, ಪ್ರಾರಂಭಿಸಬೇಕಾಗಿದೆ	
40	–ಸದರ–	ಯಲದಗುಂಡಿ	2006	ಮಂಜೂರಾಗಿದ್ದು ಪ್ರಾರಂಭಿಸಬೇಕಾಗಿದೆ	
41	–ಸದರ–	ಯಕಲೂರ ತಾಂಡ	2006	ಮಂಜೂರಾಗಿದ್ದು, ಪ್ರಾರಂಭಿಸಬೇಕಾಗಿದೆ	
42	ಹುಮನಾಬಾದ	ಚಿತ್ತಕೋಟಾ	2000	ಮಂಜೂರಾಗಿದ್ದು ಪ್ರಾರಂಭಿಸಬೇಕಾಗಿದೆ	
43	ಹುಮನಾಬಾದ	ರಾಮೂರ	2004	ಪ್ರಗತಿಯಲ್ಲಿದೆ	
44	–ಸದರ–	ಭದ್ರಾಪೂರ	2004	ಪೂರ್ಣಗೊಂಡಿದೆ	
45	–ಸದರ–	ಕರಪಾಕಪಳ್ಳಿ	2006	ಮಂಜೂರಾಗಿದ್ದು ಪ್ರಾರಂಭಿಸಬೇಕಾಗಿದೆ	
46	–ಸದರ–	ಹುಡಗಿ	2006	ಮಂಜೂರಾಗಿದ್ದು, ಪ್ರಾರಂಭಿಸಬೇಕಾಗಿದೆ	
47	ಹುಲಸೂರ	ಕುಮಾರ ಚಂಚೋಳಿ	1995	ಮಂಜೂರಾಗಿದ್ದು ಪ್ರಾರಂಭಿಸಬೇಕಾಗಿದೆ	
48	–ಸದರ–	ಜಲಸಂಗಿ	2005	ಪೂರ್ಣಗೊಂಡಿದೆ	

ಟಿಪ್ಪಣಿ – ಮಂಜೂರಾಗದೇ ಇರುವ ಕಾಮಗಾರಿಗಳು

(54) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೀದರ ಜಿಲ್ಲೆಯ ವಿವಿಧ ವಿಧಾನ ಸಭಾ ಕ್ಷೇತ್ರಗಳ ಯಾವ ಯಾವ ಗ್ರಾಮಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಹೊಸ ಕೆರೆಗಳನ್ನು ನಿರ್ಮಿಸಲು ಸರ್ವೆ ಮಾಡಲಾಗಿದೆ, ಈ ಸರ್ವೆಯನ್ನು ಯಾವಾಗ ಕೈಗೊಳ್ಳಲಾಯಿತು,

ಆ) ಈ ಪೈಕಿ ಇಲ್ಲಿಯವರೆಗೆ ಎಷ್ಟು ಕೆರೆಗಳ ಕಾಮಗಾರಿ ಪ್ರಗತಿಯಲ್ಲಿದೆ, (ಗ್ರಾಮವಾರು ವಿವರಗಳನ್ನು ಒದಗಿಸುವುದು)

ಇ) ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳನ್ನು ನಿರ್ಮಿಸಲಾಗುವುದು, ಇವುಗಳಿಂದ ಎಷ್ಟು ಎಕರೆ ಜಮೀನಿಗೆ ನೀರಾವರಿ ಮತ್ತು ಎಷ್ಟು ಜನಸಂಖ್ಯೆಗೆ ಕುಡಿಯುವ ನೀರಿನ ಸೌಲಭ್ಯ ದೊರೆಯುತ್ತದೆ,

ಈ) ಹೊಸ ಕೆರೆಗಳ ನಿರ್ಮಾಣಕ್ಕೆ ಸರ್ಕಾರ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಮತ್ತು ವೆಚ್ಚ ಮಾಡಿರುವ ಹಣವೆಷ್ಟು, ಪ್ರಸಕ್ತ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುತ್ತಿದೆ,

ಉ) ಸದರಿ ಕೆರೆಗಳನ್ನು ನಿರ್ಮಿಸಲು ನಬಾರ್ಡ್‌ನಿಂದ ಅನುದಾನವನ್ನು ಪಡೆದುಕೊಳ್ಳಲಾಗಿದೆಯೇ, ಪಡೆದುಕೊಂಡಿದ್ದಲ್ಲಿ ಎಷ್ಟು ಮೊತ್ತದ ಅನುದಾನವನ್ನು ಪಡೆದುಕೊಳ್ಳಲಾಗಿದೆ ಇದಕ್ಕೆ ರಾಜ್ಯ ಸರ್ಕಾರವು ತನ್ನ ಪಾಲಿನ ಎಷ್ಟು ಮೊತ್ತದ ಮ್ಯಾಚಿಂಗ್ ಗ್ರಾಂಟನ್ನು ಬಿಡುಗಡೆ ಮಾಡಿದೆ? (ಕಳೆದ 3 ವರ್ಷಗಳ ವಿವರಗಳನ್ನು ಒದಗಿಸುವುದು)

ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು)

ಅ) 1985 ರಿಂದ 2006 ರ ಅವಧಿಯಲ್ಲಿ 48 ಕೆರೆ ಕಾಮಗಾರಿಗಳಿಗೆ ಸರ್ವೆ ಕಾರ್ಯ ಮಾಡಲಾಗಿದೆ

ಆ) 1) ಸರ್ವೆ ಮಾಡಿದ ಕಾಮಗಾರಿಗಳು–48

2) ಈ ಪೈಕಿ ಮಂಜೂರಾದ ಕಾಮಗಾರಿಗಳು–41

ಅ) ಪೂರ್ಣಗೊಂಡಿರುವ ಕಾಮಗಾರಿಗಳು–5

ಆ) ಪ್ರಗತಿಯಲ್ಲಿರುವ ಕಾಮಗಾರಿಗಳು–24

ಇ) ಪ್ರಾರಂಭವಾಗಿ ಸಾಕಷ್ಟು ಪ್ರಗತಿಯ ನಂತರ ಅನುದಾನ ಕೊರತೆಯಿಂದ ಸ್ಥಗಿತಗೊಂಡಿರುವ ಕಾಮಗಾರಿ–1

ಈ) ಪ್ರಾರಂಭಿಸಬೇಕಾಗಿರುವ ಕಾಮಗಾರಿ–11

3) ಸರ್ವೆ ಮಾಡಿರುವ ಆದರೆ ಇನ್ನು ಮಂಜೂರಾಗದೆ ಇರುವ ಕಾಮಗಾರಿಗಳು–7

ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಇ) ಮಂಜೂರಾಗದೆ ಇರುವ 775 00 ಲಕ್ಷ ರೂ ಗಳ ಅಂದಾಜು ಮೊತ್ತದ 7 ಹೊಸ ಕೆರೆ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಲಭ್ಯವಾದಲ್ಲಿ ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು ಇವುಗಳಿಂದ 900 ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ

ಕುಡಿಯುವ ನೀರಿನ ಉಪಯೋಗಕ್ಕಾಗಿ ಸಣ್ಣ ನೀರಾವರಿ ಇಲಾಖೆಯಲ್ಲಿ ಯೋಜನೆಗಳನ್ನು ನಿರ್ಮಿಸುವುದಿಲ್ಲ ಆದರೆ ಪರೋಕ್ಷವಾಗಿ ಈ ಉದ್ದೇಶಕ್ಕಾಗಿ ಉಪಯೋಗವಾಗುವುದು

ಈ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಹೊಸಕೆರೆಗಳ ನಿರ್ಮಾಣಕ್ಕೆ ಬಿಡುಗಡೆ ಮಾಡಿರುವ ಮೊತ್ತ/ವೆಚ್ಚ ರೂ 1091 07 ಲಕ್ಷ, ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನ 1099 50 ಲಕ್ಷ ರೂಗಳು

ಉ) 21 ಕಾಮಗಾರಿಗಳಿಗೆ ನಬಾರ್ಡ್‌ನಿಂದ 1600 10 ಲಕ್ಷ ರೂ ಸಾಲ ಮಂಜೂರಾಗಿರುತ್ತದೆ ಕಳೆದ 3 ವರ್ಷಗಳಿಂದ ನಬಾರ್ಡ್‌ನಿಂದ ಪಡೆಯಲಾಗಿರುವ ಮರುಪಾವತಿ ಮೊತ್ತ ಹಾಗೂ ರಾಜ್ಯದ ಪಾಲು ವಿವರಗಳು ಕೆಳಕಂಡಂತಿದೆ

ಮೊತ್ತ ಲಕ್ಷ ರೂಗಳಲ್ಲಿ

ವರ್ಷ	ನಬಾರ್ಡ್‌ನಿಂದ ಮರುಪಾವತಿಯಾದ ಮೊತ್ತ	ರಾಜ್ಯದ ಪಾಲು
2004–05	3 79	40 08
2005–06	86 64	65 16
2006–07	408 32	352 47
2007–08	16 17	34 00
ಒಟ್ಟು	**514 92**	**491 71**

61 ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕಳೆದ ಸಾಲಿನಲ್ಲಿ ಹಾಗೂ ಸೂಕ್ತ ಪ್ರಸಕ್ತ ಸಾಲಿನ ಆಯುವ್ಯಯದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಲಾಗಿರುವ ಹಣವೆಷ್ಟು,

ಆ) ಪ್ರಸಕ್ತ ಸಾಲಿನಲ್ಲಿ ಇಲಾಖೆಯ ವತಿಯಿಂದ ಯಾವ ಯಾವ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ, (ಜಿಲ್ಲಾ ವಾರು ಅಂಕಿ ಅಂಶಗಳನ್ನು ಒದಗಿಸುವುದು)

ಇ) ಈ ಸಾಲಿನಲ್ಲಿ ಸಣ್ಣ ನೀರಾವರಿ ಯೋಜನೆಗಳ ಕಾಮಗಾರಿಗಳಿಗಾಗಿ ಪ್ರತಿ ಜಿಲ್ಲೆಗೆ ಒದಗಿಸಲಾಗಿರುವ ಹಣದ ಮೊತ್ತವೆಷ್ಟು,

ಈ) ಈ ಪೈಕಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು)

ಅ) ಸಣ್ಣ ನೀರಾವರಿ ಇಲಾಖೆಗೆ 2006–07 ನೇ ಸಾಲಿನ ಆಯವ್ಯಯದಲ್ಲಿ ಯೋಜನೆ ಲೆಕ್ಕ ಶೀರ್ಷಿಕೆಯಡಿ 421 93 ಕೋಟಿ ರೂ ಗಳನ್ನು ಮತ್ತು 2007–08ನೇ ಸಾಲಿನಲ್ಲಿ 713 85 ಕೋಟಿ ರೂ ಗಳನ್ನು ಒದಗಿಸಲಾಗಿದೆ

ಆ) ಪ್ರಸಕ್ತ ಸಾಲಿನಲ್ಲಿ ಈ ಇಲಾಖೆಯ ವತಿಯಿಂದ ಹೊಸ ಕೆರೆಗಳ ನಿರ್ಮಾಣ, ಕೆರೆಗಳ ಆಧುನೀಕರಣ, ಏತ ನೀರಾವರಿ ಯೋಜನೆಗಳು,